# ಪತ್ರಿಕಾ ಪ್ರಕಟಣೆ

ವಿಷಯ: ವಾಣಿಜ್ಯ ತೆರಿಗೆಗಳ ಇಲಾಖೆ, ಗಾಂಧಿನಗರ ಕೇಂದ್ರ ಕಛೇರಿಯಲ್ಲಿ
ಜಿ.ಎಸ್.ಕೆ ಬಯೋಮೆಟ್ರಿಕ್ ಸೆಂಟರ್‌ನ ಕಾರ್ಯಾರಂಭ

*****

ಜಿ.ಎಸ್.ಕೆ (ಜಿ.ಎಸ್.ಟಿ ಸೇವಾಕೇಂದ್ರ) ಬಯೋಮೆಟ್ರಿಕ್ ಸೆಂಟರ್‌ಗಳನ್ನು ಇಂದು ದಿನಾಂಕ: 10.09.2024 ರಂದು ಕಾರ್ಯಾರಂಭಗೊಳಿಸಲಾಯಿತು. ವಾಣಿಜ್ಯ ತೆರಿಗೆ ಇಲಾಖೆಯಿಂದ ಕರ್ನಾಟಕದಾದ್ಯಂತ ಒಟ್ಟು 120 ಜಿ.ಎಸ್.ಕೆ ಬಯೋಮೆಟ್ರಿಕ್ ಸೆಂಟರ್‌ಗಳನ್ನು ಆರಂಭಿಸಿದೆ. ಅರ್ಜಿದಾರರಿಗೆ ಜಿ.ಎಸ್.ಕೆ ಬಯೋಮೆಟ್ರಿಕ್ ಸೆಂಟರ್‌ಗಳಿಗೆ ಭೇಟಿ ನೀಡುವ ಸಮಯವನ್ನು ಮುಂಗಡವಾಗಿ ನಿಗದಿಗೊಳಿಸುವ ಸೌಲಭ್ಯವನ್ನು ಸಹ ಒದಗಿಸಲಾಗಿದೆ.

ಈ ಕೇಂದ್ರಗಳಲ್ಲಿ ಆಧಾರ್ ಬಯೋಮೆಟ್ರಿಕ್ ದೃಢೀಕರಣದ ಮೂಲಕ ಹೊಸದಾಗಿ ನೋಂದಣಿ ಪಡೆಯಲು ಇಚ್ಛಿಸುವ ಅರ್ಜಿದಾರರ ಬಯೋಮೆಟ್ರಿಕ್ ದೃಢೀಕರಣ ಮತ್ತು ದಾಖಲೆಗಳ ಪರಿಶೀಲನೆ ಮಾಡಲಾಗುತ್ತದೆ. ಈ ಹಂತದ ಪ್ರಕ್ರಿಯೆಯು ಅಮಾಯಕರ ದಾಖಲೆಗಳನ್ನು ಬಳಸಿಕೊಂಡು ಪಡೆಯುವ ನಕಲಿ ಜಿ.ಎಸ್.ಟಿ ನೋಂದಣಿಗಳನ್ನು ತಡೆಯುವಲ್ಲಿ ನೆರವಾಗಿ ರಾಜ್ಯದಲ್ಲಿ ಉತ್ತಮ ವ್ಯಾವಹಾರಿಕ ವಾತಾವರಣ ಉತ್ತೇಜಿಸಲಿದೆ.

ವಾಣಿಜ್ಯ ತೆರಿಗೆಗಳ ಆಯುಕ್ತರು,
ಕರ್ನಾಟಕ, ಬೆಂಗಳೂರು.

ವಾಣಿಜ್ಯ ತೆರಿಗೆಗಳ ಆಯುಕ್ತ
(ಕರ್ನಾಟಕ) ಬೆಂಗಳೂರು